muthoot PAPPACHAN
HOUSING FINANCE

# ಮುತ್ತೂಟ್ ಹೌಸಿಂಗ್ ಫೈನಾನ್ಸ್ ಕಂಪನಿ ಲಿಮಿಟೆಡ್

## ಅತ್ಯಂತ ಪ್ರಮುಖವಾದ ನಿಯಮಗಳು ಹಾಗೂ ನಿಬಂಧನೆಗಳು /ಮೋಸ್ಟ್ ಇಂಪಾರ್ಟೆಂಟ್ ಟರ್ಮ್ಸ್ ಆ್ಯಂಡ್ ಕಂಡೀಶನ್ಸ್ (ಎಮ್ಐಟಿಸಿ)

| | | | |
|---|---|---|---|
| ಅರ್ಜಿ ಸಂ. | | | |
| ಲೋನ್ ಪ್ರಾಡಕ್ಟ್ | | ಸ್ಕೀಮ್ | |

ಸಾಲಗಾರ .......................................................................................................................... ಹಾಗೂ ಮುತ್ತೂಟ್ ಹೌಸಿಂಗ್ ಫೈನಾನ್ಸ್ ಕಂಪನಿ ಲಿಮಿಟೆಡ್ (ಎಮ್ಎಚ್ ಎಫ್ಸಿಎಲ್) ನಡುವೆ ಒಪ್ಪಿಕೊಂಡಿರುವ ಪ್ರಮುಖ ನಿಯಮಗಳು ಹಾಗೂ ನಿಬಂಧನೆಗಳು ಈ ಕೆಳಗಿನಂತಿವೆ.

| | | |
|---|---|---|
| **1.** | **ಸಾಲ ಮಂಜೂರಾತಿ ಮೊತ್ತ** | (₹) .............................................../ |
| **2.** | **ಬಡ್ಡಿ** | ದರ ........................ %ವಾರ್ಷಿಕ |
| | | i) ದರದ ಪ್ರಕಾರ –ಚರ (ಫ್ಲೋಟಿಂಗ್) ಸ್ಥಿರ (ಫಿಕ್ಸ್ಡ್) |
| | | ii) 2)ವಿಧಿಸಬಹುದಾದ ಬಡ್ಡಿ(...................... ಅಂದರೆ ........................% (ಉಲ್ಲೇಖ ದರ +/- ......................) ಚರ ದರದ ಸಾಲಗಾಳಿಗಾಗಿ ; ಹಾಗೂ ...................... ಸ್ಥಿರ ದರದ ಸಾಲಗಳಿಗಾಗಿ) |
| | | iii) ಮೊರಟೋರಿಯಂ/ಸಬ್ಸಿಡಿ : ಸರ್ಕಾರದ ಸ್ಕೀಮ್ ಪ್ರಕಾರ |
| | | **iv) ಬಡ್ಡಿಯನ್ನು ಮರುಹೊಂದಿಸಿದ ದಿನಾಂಕ :**<br>ಎಮ್ಎಚ್ಎಫ್ಸಿಎಲ್ ತನ್ನ ಸ್ವವಿವೇಚನೆಯಲ್ಲಿ , ಸಾಲದ ಅವಧಿಯಲ್ಲಿ ಅದರ ಮಾರುಕಟ್ಟೆ ಪರಿಸ್ಥಿತಿಗಳ ಪ್ರಕಾರ ಹಾಗೂ/ಅಥವಾ ಅನ್ವಯವಾಗುವ ಕಾನೂನುಗಳು ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿದ್ದರೆ ಯಾವುದೇ ಸಮಯದಲ್ಲಿ ಹಾಗೂ ಕಾಲ ಕಾಲಕ್ಕೆ ಬಡ್ಡಿದರವನ್ನು ಪರಿಷ್ಕರಿಸಲು ಅರ್ಹತೆಯನ್ನು ಹೊಂದಿರುತ್ತದೆ. ಬಡ್ಡಿಗೆ ಸಂಬಂಧಿಸಿದಂತೆ ಅಂತಹ ಬದಲಾವಣೆ/ಪರಿಷ್ಕರಣೆಯು ನಿರೀಕ್ಷಿತ ಪರಿಣಾಮವನ್ನು ಹೊಂದಿರುತ್ತದೆ. |
| ಬಡ್ಡಿದರ /ಇಎಮ್ಐ ಅಥವಾ ವಿಶೇಷ ಆದ್ಯತೆಯ ದರಗಳಲ್ಲಿ ಬದಲಾವಣೆಗಳಿದ್ದ ಸಂದರ್ಭದಲ್ಲಿ ನಾವು ನಿಮಗೆ ಪತ್ರಗಳು/ಎಸ್ಎಮ್ಎಸ್/ನೋಂದಾಯಿತ ಇಮೇಲ್ / ನಮ್ಮ ದಾಖಲೆಗಳಲ್ಲಿ ನವೀಕರಿಸಿದಂತೆ ಕೊನೆಯದಾಗಿ ತಿಳಿದಿರುವ ವಿಳಾಸದಲ್ಲಿ ಅಥವಾ www.muthoothousing.com (ವೆಬ್ಸೈಟ್)ನಲ್ಲಿ ನವೀಕರಿಸುವ ಅಥವಾ ಸಂವಹನದ ಇತರ ಮೂಲದ ಮೂಲಕ ನಿಮಗೆ ತಿಳಿಸುತ್ತೇವೆ. | | |
| **3.** | **ಕಂತಿನ ಪ್ರಕಾರಗಳು** | ಮಾಸಿಕ |
| **4.** | **ಸಾಲದ ಅವಧಿ/ ಒಟ್ಟು ಇಎಮ್ಐಗಳ ಸಂಖ್ಯೆ** | ........................ ತಿಂಗಳಗಳು/........................ –ಇಎಮ್ಐಗಳು (ಚರ ಬಡ್ಡಿದರದ (ಫ್ಲೋಟಿಂಗ್ ರೇಟ್ ಆಫ್ ಇಂಟ್ರೆಸ್ಟ್‌ನ) ಸಂದರ್ಭದಲ್ಲಿ ಎಮ್ಎಚ್ಎಫ್ಸಿಎಲ್ ಪ್ರೈಮ್ ಲೆಂಡಿಂಗ್ ರೇಟ್‌ನಲ್ಲಿನ ಬದಲಾವಣೆಯೊಂದಿಗೆ ಬದಲಾವಣೆಗೆ ಒಳಪಟ್ಟಿರುತ್ತದೆ) |
| **5.** | **ಸಾಲದ ಉದ್ದೇಶ** | |
| **6.** | **ಫೀ ಹಾಗೂ ಇತರ ಶುಲ್ಕಗಳು** | |

| | | |
|---|---|---|
| **6.i. ಅಪ್‌ಫ್ರಂಟ್ ಫೀಗಳು** | (i) ಆಡಳಿತಾತ್ಮಕ ಹಾಗೂ ಕಾರ್ಯಾಚರಣೆಯ ವೆಚ್ಚ-1 | ಸಾಲದ ಅರ್ಜಿಯ ಸಮಯದಲ್ಲಿ: ಎಚ್ಎಲ್‌ಗಾಗಿ ₹ 2,500 + ಜಿಎಸ್‌ಟಿ, ನಾನ್ –ಹೋಮ್ ಲೋನ್‌ಗಾಗಿ ₹ 3,250+ ಜಿಎಸ್‌ಟಿ (ಮರುಪಾವತಿಸಲಾಗುವುದಿಲ್ಲ) |
| | (ii) ಆಡಳಿತಾತ್ಮಕ ಹಾಗೂ ಕಾರ್ಯಾಚರಣೆಯ ವೆಚ್ಚ-2 | ವಿತರಣೆಯ ಸಮಯದಲ್ಲಿ: ಎಚ್ಎಲ್‌ಗಾಗಿ 2%, ನಾನ್ –ಹೋಮ್ ಲೋನ್‌ಗೆ 3% (ಮಂಜೂರಾತಿ ಸಾಲ ಮೊತ್ತದ) (ಜಿಎಸ್‌ಟಿ ಅನ್ವಯಿಸುತ್ತದೆ) |
| | (iii) ಎಲ್ಐಪಿ (ಲಿಪಿಡ್ ಇನ್‌ಕಮ್ ಪ್ರೋಗ್ರಾಂ) ಶುಲ್ಕಗಳು (ಸ್ವ-ಉದ್ಯೋಗದ ಪ್ರಕರಣಕ್ಕೆ ಅನ್ವಯವಾಗುವಂತೆ) | ₹ 2,000 + ಜಿಎಸ್‌ಟಿ |

**6.ii. ಇತರ ಶುಲ್ಕಗಳು**

| | | | | | |
|---|---|---|---|---|---|
| 1. | ಸಿಇಆರ್ಎಸ್ಎಐ ಶುಲ್ಕಗಳು | ಸಿಇಆರ್ಎಸ್ಎಐ ಶುಲ್ಕಗಳ ಅನುಸೂಚಿಯ ಪ್ರಕಾರ ರಚನೆ ಹಾಗೂ ಸಂತೃಪ್ತಿ | 2. | ಡುಪ್ಲಿಕೇಟ್ ಇಂಟ್ರೆಸ್ಟ್ ಸರ್ಟಿಫಿಕೇಟ್ /ಡುಪ್ಲಿಕೇಟ್ ಆ್ಯನ್ಯೂಅಲ್ ಆಕೌಂಟ್ ಸ್ಟೇಟ್‌ಮೆಂಟ್/ಡುಪ್ಲಿಕೇಟ್ ಪ್ರೊವಿಶನಲ್ ಸರ್ಟಿಫಿಕೇಟ್ | ₹ 500/- |
| 3. | ನಂತರದ ವಿತರಣೆಗಾಗಿ ಟೆಕ್ನಿಕಲ್ ವಿಸಿಟ್ ಶುಲ್ಕಗಳು | ₹ 500/- | 4. | ಡುಪ್ಲಿಕೇಟ್ ನಂ ಡ್ಯೂಸ್ ಸರ್ಟಿಫಿಕೇಟ್ | ₹ 500/- |
| 5. | ಚೆಕ್ /ಇಸಿಎಸ್/ಎನ್ಎಸಿಎಚ್ ಬೌನ್ಸ್ ಶುಲ್ಕಗಳು (ಪ್ರತಿ ಉಪಕರಣ/ವಹಿವಾಟು ) | ₹ 500/- | 6. | ಫೋರ್‌ಕ್ಲೋಸರ್ ಸ್ಟೇಟ್‌ಮೆಂಟ್ ಶುಲ್ಕಗಳು /ಎಸ್ಒಎ/ ರೀಪೇಮೆಂಟ್ ಶೆಡ್ಯೂಲ್ | ₹ 500/- |
| 7. | ಶುಲ್ಕಗಳು/ ವಿಳಂಬ ಪಾವತಿ ಶುಲ್ಕಗಳು | ತಿಂಗಳಿಗೆ ಹಳೆಬಾಕಿ ಮೊತ್ತದ 2% | 8. | ಡಾಕ್ಯುಮೆಂಟ್ ಮರುಪಡೆಯುವಿಕೆಯ ಶುಲ್ಕಗಳು | ₹ 1,000/- |
| 9. | ಬಾಕಿಯ ಕಲೆಕ್ಷನ್‌ಗಾಗಿ ಗ್ರಾಹಕರ ಸ್ಥಳಕ್ಕೆ ಪ್ರತಿ ವೈಯಕ್ತಿಕ ಭೇಟಿ | ₹ 250/- | 10. | ಲಿಸ್ಟ್ ಆಫ್ ಡಾಕ್ಯುಮೆಂಟ್ಸ್ (ಎಲ್ಒಡಿ) ಶುಲ್ಕಗಳು | ₹ 500/- |
| 11. | ಲೀಗಲ್ ಹಾಗೂ ರಿಕವರಿ ಶುಲ್ಕಗಳು | ಆ್ಯಕ್ಚ್ಯುಅಲ್‌ಗಳ ಪ್ರಕಾರ | 12. | ಆರ್‌ಸಿಯು ಶುಲ್ಕಗಳು | ₹ 1,000/- |
| 13. | ಪ್ರಾಪರ್ಟಿ ಡಾಕ್ಯುಮೆಂಟ್‌ಗಳ ಫೋಟೋಕಾಪಿ | ₹ 500/- | 14. | ಡಿಸ್‌ಬರ್ಸ್‌ಮೆಂಟ್ ಚೆಕ್ ಕ್ಯಾನ್ಸಲೇಶನ್ ಶುಲ್ಕಗಳು ಹಾಗೂ ಮರು-ನೀಡಿಕೆ | ₹ 500/- |
| 15. | ಕ್ಯಾಶ್ ಕಲೆಕ್ಷನ್ ಶುಲ್ಕಗಳು | ಕಲೆಕ್ಟ್ ಮಾಡಿದ ಒಟ್ಟು ಮೊತ್ತದ 1% | 16. | ರೀಪೇಮೆಂಟ್ ಅಕೌಂಟ್ ಸ್ವ್ಯಾಪಿಂಗ್ ಶುಲ್ಕಗಳು | ₹ 500/- |
| 17. | ಡಾಕ್ಯುಮೆಂಟ್ ಕಸ್ಟಡಿಯನ್ ಶುಲ್ಕಗಳು | ಸಾಲದ ಮುಕ್ತಾಯದ ದಿನಾಂಕದಿಂದ ಮೂರು ತಿಂಗಳುಗಳ ನಂತರ ಪ್ರತಿ ತಿಂಗಳಿಗೆ ₹ 200. | 18. | ಡಿಸ್‌ಬರ್ಸ್‌ಮೆಂಟ್ ಕ್ಯಾನ್ಸಲೇಶನ್ ಶುಲ್ಕಗಳು | ₹ 5000+ ತೆರಿಗೆಗಳು ಹಾಗೂ ರದ್ದತಿಯ ಕೋರಿಕೆಯನ್ನು ಪಡೆಯುವವರೆಗೆ ಪಿಇಎಮ್ಐ |
| 19. | ಬಡ್ಡಿದರದ ಶುಲ್ಕಗಳ ಬದಲಾವಣೆ/ಪರಿವರ್ತನೆ<br>• ಚರದಿಂದ ಚರ ಬಡ್ಡಿಯ ದರ<br>• ಸ್ಥಿರ ದರದಿಂದ ಚರ ದರ ಅಥವಾ ಪ್ರತಿಕ್ರಮದಲ್ಲಿ<br>• ಸ್ಥಿರದಿಂದ ಸ್ಥಿರ ಬಡ್ಡಿದರ | ಬಾಕಿಉಳಿದಿರುವ ಅಸಲಿನ ಮೊತ್ತದ ಮೇಲೆ 1% | 20. | ಹೆಚ್ಚುವರಿ ಶುಲ್ಕಗಳು : ನಾನ್-ಎನ್‌ಕಂಬರೆನ್ಸ್ ಸರ್ಟಿಫಿಕೇಟ್/ಸರ್ಚ್ ರಿಪೋರ್ಟ್,ವಾಲ್ಯೂಯೇಶನ್ ಟೆಕ್ನಿಕಲ್ ಫೀ, ಕಂಪ್ಲೀಷನ್ ಸರ್ಟಿಫಿಕೇಟ್ ,ಡಾಕ್ಯುಮೆಂಟ್ ಕಸ್ಟಡಿಯನ್ ಶುಲ್ಕಗಳು | ವಾಸ್ತವದ ಪ್ರಕಾರ |

i. ಗೂಡ್ಸ್ ಹಾಗೂ ಸರ್ವಿಸ್ ಟ್ಯಾಕ್ಸ್ (ಜಿಎಸ್‌ಟಿ) ಹಾಗೂ ಯಾವುದೇ ಇತರ ತೆರಿಗೆಗಳನ್ನು ಸರ್ಕಾರವು ಅನ್ವಯಿಸುವಂತೆ ಹೆಚ್ಚುವರಿ ವಿಧಿಸಲಾಗುತ್ತದೆ.
iii. ಸಾಲ/ಸಾಲದ ಅರ್ಜಿಯ ಮೇಲಿನ ಯಾವುದೇ ಇತರ ಸರ್ಕಾರಿ ಲೇವಿಗಳು,ಶುಲ್ಕಗಳು,ತೆರಿಗೆಗಳು ಮುಂತಾದವುಗಳನ್ನು ಅನ್ವಯಿಸಿದಂತೆ ಹಾಗೂ ಅನ್ವಯಿಸಿದಾಗ ಸಾಲಗಾರರು ಪಾವತಿಸುತ್ತಾರೆ.
iii. ಇಲ್ಲಿ ಮೇಲೆ ತಿಳಿಸಿದ ಶುಲ್ಕಗಳು ಹಾಗೂ ವೆಚ್ಚಗಳು ಮುಂತಾದವುಗಳ ದರಗಳು ಎಮ್ಎಚ್ಎಫ್ಸಿಎಲ್‌ನ ಸ್ವಂತ ವಿವೇಚನೆಗೆ ಅನುಗುಣವಾಗಿ ಕಾಲ ಕಾಲಕ್ಕೆ ಬದಲಾವಣೆ/ಪರಿಷ್ಕರಣೆಗೆ ಒಳಪಟ್ಟಿರುತ್ತವೆ.
iv. ಯಾವುದೇ ಸಾಲದ ಡಾಕ್ಯುಮೆಂಟ್‌ನ ನಿರ್ವಹಣೆ /ನೋಂದಣಿಗಾಗಿ ಶುಲ್ಕಗಳನ್ನು ಅನ್ವಯವಾಗುವಂತೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಗ್ರಾಹಕರು ಪಾವತಿಸಬೇಕಾಗುತ್ತದೆ.

**6.iii.** ಪೂರ್ವ ಪಾವತಿ /ಫೋರ್‌ಕ್ಲೋಸರ್ ಶುಲ್ಕಗಳು

| | **ಹೋಮ್ ಲೋನ್‌ನ ಪೂರ್ವಪಾವತಿ /ಫೋರ್‌ಕ್ಲೋಸರ್ ಶುಲ್ಕಗಳು** | **ಪೂರ್ವಪಾವತಿ /ಫೋರ್‌ಕ್ಲೋಸರ್ ಶುಲ್ಕಗಳು -ಲೋನ್ ಅಗೇನಸ್ಟ್ ಪ್ರಾಪರ್ಟಿ** |
|---|---|---|
| **ಮಾರ್ಪಡಿಸಬಹುದಾದ/ಚರ ಬಡ್ಡಿ ದರ** | ವೈಯಕ್ತಿಕ ಸಾಲಗಾರರಿಗೆ ಸಹ ಅರ್ಜಿದಾರರೊಂದಿಗೆ ಅಥವಾ ಹೊರತಾಗಿ ಮಂಜೂರು ಮಾಡಿದ ಯಾವುದೇ ಸಾಲಕ್ಕಾಗಿ ಯಾವುದೇ ಮೂಲಗಳ ಮೂಲಕ ಭಾಗಶಃ ಅಥವಾ ಪೂರ್ಣ ಪೂರ್ವಪಾವತಿಯನ್ನು ಮಾಡಿದ ಕಾರಣದಿಂದ ಯಾವುದೇ ಪೂರ್ವಪಾವತಿ ಶುಲ್ಕಗಳನ್ನು ಪಾವತಿಸಬೇಕಾಗಿರುವುದಿಲ್ಲ, ಸಾಲವನ್ನು ಬಿಜಿನೆಸ್‌ನ ಉದ್ದೇಶಕ್ಕಾಗಿ ***ಮಂಜೂರು ಮಾಡಲಾಗಿರುವುದನ್ನು ಹೊರತುಪಡಿಸಿ . | ಸಹ ಅರ್ಜಿದಾರರೊಂದಿಗೆ ಅಥವಾ ಹೊರತಾಗಿ ಮಂಜೂರು ಮಾಡಿದ ಎಲ್ಲಾ ಸಾಲಗಳಿಗಾಗಿ ಭಾಗಶಃ ಅಥವಾ ಪೂರ್ಣ ಪೂರ್ವಪಾವತಿಯನ್ನು ಸ್ವಂತ ಮೂಲಗಳ ಮೂಲಕ ಮಾಡಲಾಗುತ್ತಿರುವಾಗ ಅದನ್ನು ಹೊರತುಪಡಿಸಿ, ಪೂರ್ವಪಾವತಿ ಶುಲ್ಕವನ್ನು* ವಿಧಿಸಲಾಗುತ್ತದೆ. ಹೀಗಿದ್ದಾಗ್ಯೂ, ಸಾಲವನ್ನು ಬಿಜಿನೆಸ್‌ನ ಉದ್ದೇಶಕ್ಕಾಗಿ ತೆಗೆದುಕೊಂಡಿದ್ದರೆ ಪೂರ್ವಪಾವತಿ ಶುಲ್ಕಗಳು ಅನ್ವಯಿಸುತ್ತವೆ. |
| **ಸ್ಥಿರ ಬಡ್ಡಿದರ** | ಸಹ ಅರ್ಜಿದಾರರೊಂದಿಗೆ ಅಥವಾ ಹೊರತಾಗಿ ಮಂಜೂರು ಮಾಡಿದ ಎಲ್ಲಾ ಸಾಲಗಳಿಗಾಗಿ ಭಾಗಶಃ ಅಥವಾ ಪೂರ್ಣ ಪೂರ್ವಪಾವತಿಯನ್ನು ಸ್ವಂತ ಮೂಲಗಳ ಮೂಲಕ ಮಾಡಲಾಗುತ್ತಿರುವಾಗ ಅದನ್ನು ಹೊರತುಪಡಿಸಿ, ಪೂರ್ವಪಾವತಿ ಶುಲ್ಕವನ್ನು* ವಿಧಿಸಲಾಗುತ್ತದೆ. | ಸಹ ಅರ್ಜಿದಾರರೊಂದಿಗೆ ಅಥವಾ ಹೊರತಾಗಿ ಮಂಜೂರು ಮಾಡಿದ ಎಲ್ಲಾ ಸಾಲಗಳಿಗಾಗಿ, ಪೂರ್ವಪಾವತಿ ಶುಲ್ಕವನ್ನು* ವಿಧಿಸಲಾಗುವುದು. |

*ಪೂರ್ವಪಾವತಿ ಶುಲ್ಕಗಳು –
ಸಾಲವನ್ನು ವಿತರಿಸಿದ 12 ತಿಂಗಳೊಳಗೆ ಫೋರ್‌ಕ್ಲೋಸ್ ಮಾಡಿದರೆ 5%
ಸಾಲವನ್ನು ವಿತರಿಸಿದ 12 ತಿಂಗಳುಗಳ ನಂತರ ಫೋರ್‌ಕ್ಲೋಸ್ ಮಾಡಿದರೆ 3%
(ಜೊತೆಗೆ ಭಾಗಶಃ ಅಥವಾ ಪೂರ್ಣ ಪೂರ್ವಪಾವತಿಗಳ ಕಾರಣದಿಂದ ಮೊತ್ತವನ್ನು ಮುಂಚಿತವಾಗಿ ಪಾವತಿಮಾಡಿರುವುದರಿಂದ ಅನ್ವಯವಾಗುವ ತೆರಿಗೆಗಳು/ಶಾಸನಬದ್ಧ ಲೇವಿಗಳು)

**ಸ್ವಂತ ಮೂಲ ಎಂದರೆ ಬ್ಯಾಂಕ್/ಎಚ್‌ಎಫ್‌ಸಿ/ಎನ್‌ಬಿಎಫ್‌ಸಿ ಹಾಗೂ/ ಅಥವಾ ಹಣಕಾಸಿನ ಸಂಸ್ಥೆಯಿಂದ ಸಾಲ ಪಡೆಯುವುದರ ಹೊರತಾಗಿ ಯಾವುದೇ ಮೂಲ. ಸಾಲದ ಪೂರ್ವಪಾವತಿಯ ಸಮಯದಲ್ಲಿ ಫಂಡ್‌ಗಳ ಮೂಲವನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಹಾಗೂ ಸರಿಯೆಂದು ಪರಿಗಣಿಸಬಹುದಾದಂತಹ ಕಾಗದಪತ್ರಗಳನ್ನು ಗ್ರಾಹಕರು ಸಲ್ಲಿಸಬೇಕಾಗುತ್ತದೆ.

***ಬಿಜಿನೆಸ್ ಉದ್ದೇಶ : ಕೆಳಗಿನ ಸಾಲಗಳನ್ನು ಬಿಜಿನೆಸ್ ಉದ್ದೇಶವೆಂದು ವರ್ಗೀಕರಿಸಲಾಗಿದೆ :

1. ಲೋನ್ ಅಗೆನ್ಸ್ಟ್ ಪ್ರಾಪರ್ಟಿ ಬಿಜಿನೆಸ್ ಉದ್ದೇಶ : ಅಂದರೆ ವರ್ಕಿಂಗ್ ಕ್ಯಾಪಿಟಲ್,ಡೆಟ್ ಕನ್ಸೊಲಿಡೇಶನ್,ಬಿಜಿನೆಸ್ ಲೋನ್‌ನ ಮರುಪಾವತಿ, ಬಿಜಿನೆಸ್‌ನ ವಿಸ್ತರಣೆ,ಬಿಜಿನೆಸ್ ಅಸೆಟ್‌ನ ಸ್ವಾಧೀನ ಅಥವಾ ಫಂಡ್‌ಗಳ ಯಾವುದೇ ರೀತಿಯ ಅಂತಿಮ ಬಳಕೆ.
2. ಬಿಜಿನೆಸ್ ಉದ್ದೇಶಕ್ಕಾಗಿ ಟಾಪ್ ಅಪ್ ಲೋನ್‌ಗಳು ಅಂದರೆ ವರ್ಕಿಂಗ್ ಕ್ಯಾಪಿಟಲ್,ಡೆಟ್ ಕನ್ಸೊಲಿಡೇಶನ್,ಬಿಜಿನೆಸ್ ಲೋನ್‌ನ ಮರುಪಾವತಿ, ಬಿಜಿನೆಸ್‌ನ ವಿಸ್ತರಣೆ,ಬಿಜಿನೆಸ್ ಅಸೆಟ್‌ನ ಸ್ವಾಧೀನ ಅಥವಾ ಫಂಡ್‌ಗಳ ಯಾವುದೇ ರೀತಿಯ ಅಂತಿಮ ಬಳಕೆ.

v) ಗ್ರಾಹಕರು ಪಾವತಿಸಿದ/ಪಾವತಿಸಬೇಕಾದ ಆಡಳಿತಾತ್ಮಕ ಹಾಗೂ ಕಾರ್ಯಚರಣೆಯ ವೆಚ್ಚವು ಸ್ವರೂಪದಲ್ಲಿ ನಾನ್ –ರಿಫಂಡೆಬಲ್ ಆಗಿರುತ್ತದೆ (ಮರುಪಾವತಿಸಲಾಗದ್ದಾಗಿರುತ್ತದೆ)
vi) ಫೋರ್‌ಕ್ಲೋಸಿಂಗ್‌ಗಾಗಿ (ಅಂದರೆ ಪೂರ್ಣ ಪೂರ್ವ–ಪಾವತಿ), ಅಥವಾ ಮಾರ್ಪಡಿಸಬಹುದಾದ ಬಡ್ಡಿದರದ ಮೇಲೆ ಪಡೆದ ಹೌಸಿಂಗ್ ಲೋನ್‌ನ ಭಾಗಶ: ಪೂರ್ವಪಾವತಿಗಾಗಿ ಯಾವುದೇ ಶುಲ್ಕಗಳು/ದಂಡಗಳಿಲ್ಲ ( ಬಿಜಿನೆಸ್ ಉದ್ದೇಶಕ್ಕಾಗಿನ ಸಾಲವನ್ನು ಹೊರತುಪಡಿಸಿ)

**ಸೂಚನೆ -1**. ಫೋರ್‌ಕ್ಲೋಸರ್ ನೀಡಿಕೆ ಹಾಗೂ ಯಾವುದೇ ಭಾಗಶಃ/ಪೂರ್ಣ ಪಾವತಿಯನ್ನು ತಿಂಗಳದ 25ನೇ ತಾರೀಖಿನ ಮೊದಲು ಸ್ವೀಕರಿಸಲಾಗುತ್ತದೆ. ತಿಂಗಳದ 25ನೇ ತಾರೀಖಿನ ನಂತರ ಪಡೆದ ಎಲ್ಲಾ ಪಾವತಿಗಳನ್ನು ಅದೇ ತಿಂಗಳಿಗಾಗಿ ಹೊಸ ಫೋರ್‌ಕ್ಲೋಸರ್ ಪತ್ರದ ನೀಡಿಕೆಯ ಮೇಲೆ ನಂತರದ ತಿಂಗಳದಲ್ಲಿ ಪರಿಗಣಿಸಲಾಗುತ್ತದೆ.

**7. ಸಾಲ ಹಾಗೂ ಬಡ್ಡಿಯ ಮರುಪಾವತಿ**

(i) ಇಎಮ್‌ಐ ಹಾಗೂ ಪ್ರಿ–ಇಎಮ್‌ಐ ( ಇಕ್ವೇಟೆಡ್ ಮಂಥ್ಲಿ ಇನ್‌ಸ್ಟಾಲ್‌ಮೆಂಟ್) ಅನ್ನು ಮಾಸಿಕ ಶಿಲ್ಕಿನ ಮೇಲೆ ಅನ್ವಯಿಸುವ ಬಡ್ಡಿದರದಲ್ಲಿ ಲೆಕ್ಕಹಾಕಲಾಗುತ್ತದೆ.

(ii) ಬಡ್ಡಿಯ ದರವು ಮಾರ್ಪಡಿಸಬಹುದಾದದ್ದಾಗಿರುತ್ತದೆ ಹಾಗೂ ಆರ್‌ಪಿಎಲ್‌ಆರ್‌ಗೆ ಲಿಂಕ್‌ಮಾಡಲಾಗಿರುತ್ತದೆ . ಬಡ್ಡಿದರದಲ್ಲಿನ ಬದಲಾವಣೆಯ ಸಂದರ್ಭದಲ್ಲಿ ಉಳಿದ ಅವಧಿಯಲ್ಲಿ ಪರಿಣಾಮಕಾರಿ ಬದಲಾವಣೆಯೊಂದಿಗೆ, ಇಎಮ್‌ಐ ಅನ್ನು ಬದಲಾವಣೆ ಮಾಡದೇ ಇರಿಸಲಾಗುತ್ತದೆ. ಹೀಗಿದ್ದಾಗ್ಯೂ , ಮುತ್ತೂಟ್ ಹೌಸಿಂಗ್ ಫೈನಾನ್ಸ್‌ಕಂಪನಿ ಲಿಮಿಟೆಡ್‌ನ ಚಾಲ್ತಿಯಲ್ಲಿರುವ ನೀತಿಯ ಪ್ರಕಾರ ಉಳಿದ ಅವಧಿಯು ಗರಿಷ್ಠ ಅನುಮತಿ ಅವಧಿಯನ್ನು ಮೀರಿದ ಸಂದರ್ಭದಲ್ಲಿ ಇಎಮ್‌ಐ ಅನ್ನು ಬದಲಾಯಿಸಲಾಗುತ್ತದೆ.

(iii) ಬಡ್ಡಿದರ /ಅವಧಿಯಲ್ಲಿನ ಯಾವುದೇಬದಲಾವಣೆಗಳನ್ನು ಲಿಖಿತರೂಪದಲ್ಲಿ/ಎಸ್‌ಎಮ್‌ಎಸ್/ಇಮೇಲ್‌ನಲ್ಲಿ ಗ್ರಾಹಕರಿಗೆ ತಿಳಿಸಲಾಗುತ್ತದೆ. ಪ್ರಿ–ಇಎಮ್‌ಐ ಬಡ್ಡಿಯನ್ನು ಅನ್ವಯವಾಗುವ ಬಡ್ಡಿಯ ದರದಲ್ಲಿ ವಿರಿಸಿದ ಮೊತ್ತದ ಮೇಲೆ ಲೆಕ್ಕಹಾಕಲಾಗುತ್ತದೆ .

(iv) ಮಾರ್ಪಡಿಸಬಹುದಾದ (ವೇರಿಯೇಬಲ್) ದರದ ಲೋನ್‌ಗಳಲ್ಲಿ ಕಡಿಮೆ ದರಕ್ಕೆ ಬದಲಿಸುವುದು – ಇತರ ಶುಲ್ಕಗಳಲ್ಲಿ ಮೇಲೆ ನಮೂದಿಸಿದಂತೆ ಶುಲ್ಕಗಳು ಅನ್ವಯಿಸುತ್ತವೆ.

(v) ಸ್ಥಿರ ದರದಿಂದ ಮಾರ್ಪಡಿಸಬಹುದಾದ (ವೇರಿಯೇಬಲ್) ದರದ ಲೋನ್‌ಗಳಿಗೆ ಬದಲಾಯಿಸುವುದು – ಇತರ ಶುಲ್ಕಗಳಲ್ಲಿ ಮೇಲೆ ನಮೂದಿಸಿದಂತೆ ಶುಲ್ಕಗಳು ಅನ್ವಯಿಸುತ್ತವೆ..

| | |
|---|---|
| (vi) ಇಎಮ್‌ಐ ಮೊತ್ತ | (₹) .................................................................................. |
| (vii) ಇಎಮ್‌ಐಗಳ ಸಂಖ್ಯೆ | ........................................................................... ತಿಂಗಳುಗಳು |
| (viii) ಪಾವತಿಯ ಅಂತಿಮ ದಿನಾಂಕ | .................................................................................. |

(ix) ಒಂದು ತಿಂಗಳಿನ ಇಎಮ್‌ಐ/ಪಿಇಎಮ್‌ಐ ತಿಂಗಳದ ಕೊನೆಯ ದಿನದಂದು ಬಾಕಿ ಇರುತ್ತದೆ ಹಾಗೂ ಅದೇ ತಿಂಗಳ 10ರಂದು ಸಂಗ್ರಹಿಸಲಾಗುತ್ತದೆ.

**8. ಸಾಲಕ್ಕಾಗಿ ಸೆಕ್ಯೂರಿಟಿ/ಕೊಲ್ಯಾಟರಲ್**

| | |
|---|---|
| ಮುತ್ತೂಟ್ ಹೌಸಿಂಗ್ ಫೈನಾನ್ಸ್‌ಕಂಪನಿ ಲಿಮಿಟೆಡ್‌ನ ಪರವಾಗಿ ಕೆಳಗೆ ನಮೂದಿಸಿದ ಆಸ್ತಿಯ ಅಡಮಾನ | |
| (i) ಸಾಲಕ್ಕಾಗಿ ಸೆಕ್ಯೂರಿಟಿ/ಕೊಲ್ಯಾಟರಲ್‌ನ ವಿವರಗಳು | ಆಸ್ತಿಯ ವಿಳಾಸ : ..................................................................................<br>.................................................................................. |
| (ii) ಜಾಮೀನುದಾರರ ಹೆಸರು (ಅನ್ವಯಿಸಿದರೆ) | |
| (iii) ಇತರ ಸೆಕ್ಯೂರಿಟಿ ( ಇತರ ಸೆಕ್ಯುರಿಟಿಗಳು,ಯಾವುದಾದರೂ ಇದ್ದರೆ ಅದರ ವಿವರಗಳನ್ನು ನಮೂದಿಸಿ) | |

**9. ಪ್ರಾಪರ್ಟಿ (ಆಸ್ತಿ) /ಸಾಲಗಾರರ ಇನ್‌ಶ್ಯೂರೆನ್ಸ್**

(i) ಸಾಲದ ಬಾಕಿ ಮೊತ್ತದ ಮೇಲೆ ಸಾಲಗಾರರ ಜೀವವನ್ನು ಸುರಕ್ಷಿತಗೊಳಿಸುವುದಕ್ಕಾಗಿ ಮುತ್ತೂಟ್ ಹೌಸಿಂಗ್ ಫೈನಾನ್ಸ್‌ಕಂಪನಿ ಲಿಮಿಟೆಡ್ ಗ್ರೂಪ್ ಕ್ರೆಡಿಟ್ ಲೈಫ್ ಇನ್‌ಶ್ಯೂರೆನ್ಸ್‌ಪಾಲಿಸಿಯನ್ನು ನೀಡಿದೆ .

(ii) ಸೆಕ್ಯುರಿಟಿಯಾಗಿ ನೀಡಲಾದ ಪ್ರಾಪರ್ಟಿಯನ್ನು ಸುರಕ್ಷಿತಗೊಳಿಸುವುದಕ್ಕಾಗಿ ಭೂಕಂಪ,ಬೆಂಕಿ,ಪ್ರವಾಹ,ಸ್ಫೋಟ,ಚಂಡಮಾರುತ ಮುಂತಾದವುಗಳ ಕಾರಣದಿಂದ ಉಂಟಾಗಬಹುದಾದ ಹಾನಿಗಳ ವಿರುದ್ಧ ವಿಮೆ ಮಾಡಲು ಮುತ್ತೂಟ್ ಹೌಸಿಂಗ್ ಫೈನಾನ್ಸ್‌ಕಂಪನಿ ಲಿಮಿಟೆಡ್ ಗ್ರೂಪ್ ಪ್ರಾಪರ್ಟಿ ಇನ್‌ಶ್ಯೂರೆನ್ಸ್‌ಪಾಲಿಸಿಯನ್ನು ನೀಡಿದೆ .

(ii) ಪ್ರಿಮಿಯಮ್ ಅನ್ನು ಒಂದೇ ಕಂತನಲ್ಲಿ ಪಾವತಿಸಬೇಕಾಗಿದ್ದು ಇದು ಸಾಲದ ಅವಧಿಗೆ ಬಾಕಿಉಳಿದ ಅಸಲಿನ ಮೊತ್ತವನ್ನು ಕವರ್ ಮಾಡುತ್ತದೆ.

(iii) ಪ್ರೀಮಿಯಮ್ ಅನ್ನು ಎಮ್‌ಎಚ್‌ಎಫ್‌ಸಿಎಲ್‌ನಿಂದ ಫಂಡ್‌ಮಾಡಲಾದ ಸಾಲದ ಮೊತ್ತಕ್ಕೆ ಸೇರಿಸಬಹುದು. ಎಮ್‌ಎಚ್‌ಎಫ್‌ಸಿಎಲ್ ಲೋನ್ ಅಪ್ಲಿಕೇಶನ್ ಫಾರ್ಮ್‌ನ ಲೈಫ್ ಇನ್‌ಶ್ಯೂರೆನ್ಸ್‌ನ ಉದ್ದೇಶಿತ ಅನುಚ್ಛೇದದಲ್ಲಿ ಸೂಚಿಸಿದಂತೆ ರಕ್ಷಣೆಯನ್ನು ಪಡೆಯುವ ಗ್ರಾಹಕರ ಸ್ವೀಕಾರದ ಆಧಾರದ ಮೇಲೆ ಲೈಫ್ ಇನ್‌ಶ್ಯೂರೆನ್ಸ್‌ಕಂಪನಿಗೆ ಡೇಟಾವನ್ನು ಮಾತ್ರ ರವಾನಿಸುತ್ತದೆ.

(iv) ಎಮ್‌ಎಚ್‌ಎಫ್‌ಸಿಎಲ್ ರಿಸ್ಕ್ ಅನ್ನು ಅಂಡರ್‌ರೈಟ್ ಮಾಡುವುದಿಲ್ಲ ಅಥವಾ ಕವರ್‌ನ (ವಿಮಾರಕ್ಷಣೆಯ) ಟರ್ಮ್‌ಗಳನ್ನು ನಿರ್ಧರಿಸುವುದಿಲ್ಲ. ಕವರ್‌ಗಾಗಿ ಉಲ್ಲೇಖಿಸಲಾದ ಪ್ರೀಮಿಯಂ ಅಥವಾ ನಿರ್ದಿಷ್ಟಪ್ರಕರಣಗಳಿಗಾಗಿ ಕವರ್‌ನ ಸೂಕ್ತತೆಯನ್ನು ವಿಮಾ ಕಂಪನಿಯು ಅದರ ಪ್ರಕ್ರಿಯೆಗಳನ್ನು ನಡೆಸಿದ ನಂತರ ಮಾತ್ರ ಇರುತ್ತದೆ.

**10. ಸಾಲದ ವಿತರಣೆಗಾಗಿ ನಿಬಂಧನೆಗಳು**

(i) ಆಡಳಿತಾತ್ಮಕ ಹಾಗೂ ಕಾರ್ಯಾಚರಣೆಯ ವೆಚ್ಚದ ಪಾವತಿಯೊಂದಿಗೆ ಮಂಜೂರಾತಿ ಪತ್ರದ ಸ್ವೀಕಾರ

(ii) ನಿಗದಿಪಡಿಸದಂತೆ, ಮಾರ್ಜಿನ್ ಕೊಡುಗೆಯನ್ನು ಪೂರ್ಣವಾಗಿ ಪಾವತಿಸಲಾಗುತ್ತದೆ. ಎಮ್‌ಎಚ್‌ಎಫ್‌ಸಿಎಲ್ ಪಾಲಿಸಿಯ ಪ್ರಕಾರ ಸಾಲದ ಮೊತ್ತವನ್ನು ನಿಗದಿತ ಅನುಪಾತಕ್ಕೆ ನಿರ್ಬಂಧಿಸಲಾಗಿದೆ. ಈ ಅನುಪಾತವನ್ನು ಒಪ್ಪಂದದ ಮೌಲ್ಯ/ಮಾರುಕಟ್ಟೆಮೌಲ್ಯದ ಶೇಕಡಾವಾರು ಮೊತ್ತ, ಯಾವುದು ಕಡಿಮೆಯಿರುತ್ತದೆಯೋ ಅದರೊಂದಿಗೆ ಲೆಕ್ಕಹಾಕಲಾಗುತ್ತದೆ. ಸಾಲಗಾರರ ಮಾರ್ಜಿನ್ ಅನ್ನು ಎಮ್‌ಎಚ್‌ಎಫ್‌ಸಿಎಲ್‌ನಿಂದ ಜಾರಿಯಲ್ಲಿರುವ ಚಾಲ್ತಿಯಲ್ಲಿರುವ ಸಾಲ ನೀಡಿಕೆಯ ನಿಯಮಗಳ ಉಲ್ಲೇಖದೊಂದಿಗೆ ಕೇಸ್ ಟು ಕೇಸ್ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ವಿತರಿಸಬೇಕಾದ ಮೊತ್ತವನ್ನು ನಿರ್ಧರಿಸುವುದಕ್ಕಾಗಿ, ಎಮ್‌ಎಚ್‌ಎಫ್‌ಎಲ್‌ನ ನಿರ್ಧಾರವು ಅಂತಿಮವಾಗಿರುತ್ತದೆ.

(iii) ಮುತ್ತೂಟ್ ಹೌಸಿಂಗ್ ಫೈನಾನ್ಸ್‌ಕಂಪನಿ ಲಿಮಿಟೆಡ್‌ನ ಸಂತೃಪ್ತಿಗಾಗಿ ಅಗತ್ಯ ಸೆಕ್ಯೂರಿಟಿ ಡಾಕ್ಯೂಮೆಂಟ್‌ಗಳನ್ನು ಕಾರ್ಯಗತಗೊಳಿಸಲಾಗಿದೆ ಹಾಗೂ ಇತರ ಪೂರ್ವ–ವಿತರಣಾ ನಮೂನೆಗಳು ಹಾಗೂ ನಿಬಂಧನೆಗಳನ್ನು ಸಂಕಲಿಸಲಾಗಿದೆ.

(iv) ಮುತ್ತೂಟ್ ಹೌಸಿಂಗ್ ಫೈನಾನ್ಸ್‌ಕಂಪನಿ ಲಿಮಿಟೆಡ್ ನಂತರದ ವಿತರಣೆಯನ್ನು ಕೋರುವ ಮೊದಲು ಮೊದಲು ವಿತರಿಸಿದ ಮೊತ್ತಗಳ ತೃಪ್ತಿಕರ ಬಳಕೆಯ ಪುರಾವೆಯನ್ನು ಹಾಗೂ ಪ್ರಾಪರ್ಟಿಯ ನಿರ್ಮಾಣದ ತೃಪ್ತಿದಾಯಕ ಪ್ರಗತಿಯನ್ನು ಪಡೆಯುತ್ತದೆ. ವಿತರಣೆಗಳು ಪ್ರಾಪರ್ಟಿಯ ನಿರ್ಮಾಣದ ಹಂತಕ್ಕೆ ಸಂಬಂಧಿಸಿರುತ್ತವೆ.

(v) ಮುತ್ತೂಟ್ ಹೌಸಿಂಗ್ ಫೈನಾನ್ಸ್‌ಕಂಪನಿ ಲಿಮಿಟೆಡ್ 24 ತಿಂಗಳುಗಳವರೆಗೆ ಭಾಗಶಃ ವಿತರಣೆಯನ್ನು ನಿಗದಿಪಡಿಸುತ್ತದೆ. ಈ ಅವಧಿಯನ್ನು ಪ್ರಾಪರ್ಟಿ ಪೂರ್ಣಗೊಳ್ಳುವಿಕೆಯ ಹಂತದ ಪರಿಶೀಲನೆಗೆ ಒಳಪಟ್ಟು ಎಮ್‌ಎಚ್‌ಎಫ್‌ಸಿಎಲ್ ಅದರ ವಿವೇಚನೆಯಲ್ಲಿ ವಿಸ್ತರಿಸಬಹುದು. ಎಮ್‌ಎಚ್‌ಎಫ್‌ಸಿಎಲ್ ವಿಸ್ತರಿಸಿದ ಅವಧಿಯವರೆಗೆ ಪಿಇಎಮ್‌ಐ ಅನ್ನು ವಿಧಿಸಬಹುದು. ಇಎಮ್‌ಐಯ ಪ್ರಾಂಭವಾಗುವ ಮೊದಲು ವಿತರಣೆಯ ದಿನಾಂಕದ ತಕ್ಷಣದ ದಿನಾಂಕದಿಂದ/ಸಬಂಧಪಟ್ಟ ದಿನಾಂಕದಿಂದ ಪಿಇಎಮ್‌ಐ ಅನ್ನು ವಿಧಿಸಲಾಗುತ್ತದೆ. ಅದರ ನಂತರ, ಸಾಲವನ್ನು ಸಂಪೂರ್ಣವಾಗಿ ವಿತರಿಸಲಾಗುತ್ತದೆ. ಅದರ ನಂತರ ಯಾವುದೇ ಭಾಗಶಃ– ವಿತರಣೆಯನ್ನು ಮುತ್ತೂಟ್ ಹೌಸಿಂಗ್ ಫೈನಾನ್ಸ್‌ಕಂಪನಿ ಲಿಮಿಟೆಡ್‌ನ ಸ್ವವಿವೇಚನೆಯಲ್ಲಿ ಪರಿಗಣಿಸಲಾಗುತ್ತದೆ.

(vi) ಗ್ರಾಹಕರು ಒದಗಿಸಿದ ಕಾಗದಪತ್ರಗಳು ಹಾಗೂ ಮಾಹಿತಿಯ ಆಧಾರದ ಮೇಲೆ ಪ್ರಾಪರ್ಟಿಯ ತೃಪ್ತಿದಾಯಕ ಕಾನೂನು ಹಾಗೂ ತಾಂತ್ರಿಕ ಅನುಮತಿಗಳ ತಕ್ಕತತ್ಪರತೆಯ ಸಮಯದಲ್ಲಿ ಎಮ್‌ಎಚ್‌ಎಫ್‌ಸಿಎಲ್ ಎಲ್ಲಾ ಸಮಂಜಸ ಕಾಳಜಿಯನ್ನು ಅಳವಡಿಸಿಕೊಳ್ಳುವಾಗ, ಗ್ರಾಹಕರಿಗೆ ಪ್ರಾಪರ್ಟಿಯ ಸ್ವತಂತ್ರ ಕಾನೂನು ಹಾಗೂ ತಾಂತ್ರಿಕ ಅಭಿಪ್ರಾಯವನ್ನು ಪಡೆಯಲು ಸಲಹೆನೀಡಲಾಗುತ್ತದೆ ಹಾಗೂ ತತ್ಪರತೆಯಲ್ಲಿನ ಯಾವುದೇ ನ್ಯೂನ್ಯತೆಗಾಗಿ ಎಮ್‌ಎಚ್‌ಎಫ್‌ಸಿಎಲ್ ಜವಾಬ್ದಾರರಾಗಿರುವುದಿಲ್ಲ.

(viii) ಮೇಲಿನ ಅಂಶಗಳ ಜೊತೆಗೆ, ಗ್ರಾಹಕರು ಲೋನ್ ಆ್ಯಗ್ರಿಮೆಂಟ್ ಹಾಗೂ ಇತರ ಡಾಕ್ಯುಮೆಂಟ್‌ಗಳು(ಕಾಗದಪತ್ರಗಳು)ಹಾಗೂ ಕಾಲ ಕಾಲಕ್ಕೆ ಅವರಿಂದ ಕಾರ್ಯಗತಗೊಳಿಸಲಾದ ಅನುಬಂಧದ ಎಲ್ಲಾ ನಿಯಮಗಳು ಹಾಗೂ ನಿಬಂಧನೆಗಳಿಗೆ ಬದ್ಧರಾಗಿರಬೇಕು.

(ix) ಮುತ್ತೂಟ್ ಹೌಸಿಂಗ್ ಫೈನಾನ್ಸ್‌ಕಂಪನಿ ಲಿಮಿಟೆಡ್ ಸಾಲದ ವಿತರಣೆಯ ಮೊದಲು ಅಥವಾ ಅದರ ನಂತರ ಯಾವುದೇ ಸಮಯದಲ್ಲಿ ನಿಯಮಗಳು ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಅಥವಾ ಹೆಚ್ಚುವರಿ ನಿಬಂಧನೆಗಳನ್ನು ನಿಗದಿಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ. ಮಂಜೂರಾತಿ ಪತ್ರ ಹಾಗೂ ಸಾಲದ ಒಪ್ಪಂದದ ನಡುವಿನ ಯಾವುದೇ ವ್ಯತ್ಯಾಸದ ಸಂದರ್ಭದಲ್ಲಿ, ಸಾಲದ ಒಪ್ಪಂದದ ನಿಯಮಗಳು ಹಾಗೂ ನಿಬಂಧನೆಗಳನ್ನು ಈ ಮಂಜೂರಾತಿ ಪತ್ರದಲ್ಲಿ ನಮೂದಿಸಲಾದ ನಿಯಮಗಳು ಹಾಗೂ ನಿಬಂಧನೆಗಳು ತಳ್ಳಿಹಾಕುತ್ತವೆ.

(x) ಕಾನೂನಿನ ಅಭಿಪ್ರಾಯದ ರಿಪೋರ್ಟ್, ಪ್ರಾಪರ್ಟಿಯ ತಾಂತ್ರಿಕ ಪರಿಶೀಲನಾ ರಿಪೋರ್ಟ್, ಮಂಜೂರಾತಿ ಪತ್ರ, ಎಮ್‌ಎಚ್‌ಎಫ್‌ಸಿಎಲ್ ನಿಂದ ಫಂಡಮಾಡಲು ಅನ್ವಯವಾಗುವ ಸಾಲದ ಒಪ್ಪಂದ ಹಾಗೂ ಇತರ ನಿಯಮಗಳು ಹಾಗೂ ನಿಬಂಧನೆಗಳಲ್ಲಿ ನಿಗಧಿಪಡಿಸಿದಂತೆ ಎಲ್ಲಾ ನಿಯಮಗಳು ಹಾಗೂ ನಿಬಂದನೆಗಳ ತೃಪ್ತಿದಾಯಕ ಅನುಸರಣೆ .

(xi) ಸಾಲಗಾರರಿಂದ ಸ್ವಂತ ಕೊಡುಗೆಯ ಪಾವತಿ

(xii) ಯಾವುದೇ ವಿಶೇಷ ಕಂಡೀಶನ್ (ಸ್ಥಿತಿ) :

**11. ಬಾಕಿಗಳ ವಸೂಲಿಗಾಗಿ ಅನುಸರಿಸಬೇಕಾದ ಕಾರ್ಯವಿಧಾನ :**

(i) ಟೆಲಿ ಕಾಲಿಂಗ್ : ಕೊನೆಯ ದಿನಾಂಕವನ್ನು ತಪ್ಪಿದ ನಂತರ ಸಾಲಗಾರ/ಸಹ–ಸಾಲಗಾರರನ್ನು ಸಂಪರ್ಕಿಸುವುದು, ಇಸಿಎಸ್/ಎನ್‌ಎಸಿಎಚ್‌ಗಾಗಿ ಆದೇಶವನ್ನು ಮಾನ್ಯಮಾಡದಿರುವುದು ಅಥವಾ ಚೆಕ್ ಬೌನ್ಸ್‌ಮಾಡುವುದನ್ನು ಒಳಗೊಂಡಿರುತ್ತದೆ.

(ii) ಫಿಲ್ಡ್ ವಿಸಿಟ್ : ಇದು ಸಾಲಗಾರರನ್ನು ಭೇಟಿ ಮಾಡುವುದು ಹಾಗೂ ಬಾಕಿ ಮೊತ್ತದ ಪಾವತಿಯನ್ನು ಸಂಗ್ರಹಿಸುವುದನ್ನು ಒಳಗೊಂಡಿರುತ್ತದೆ.

(iii) ಕಾನೂನು ಕ್ರಮ : ಡಿಫಾಲ್ಟ್‌ನ ಸಂದರ್ಭದಲ್ಲಿ ಅಥವಾ ಸಾಲದ ಖಾತೆಯನ್ನು ಎನ್‌ಪಿಎ ಎಂದು ಘೋಷಿಸುವ ಸಂದರ್ಭದಲ್ಲಿ ಸಾಲ ವಸೂಲಿಗಾಗಿ ಕೇಸ್ ಟು ಕೇಸ್ ಆಧಾರದ ಮೇಲೆ ಕಾನೂನಿನ ಕ್ರಮ ಹಾಗೂ/ಸರ್ಫೇಸಿ ಪ್ರಾರಂಭಿಸಲು ಲೋನ್ ರೀಕಾಲ್ ನೋಟಿಸು ಹಾಗೂ ಲೀಗಲ್ ನೋಟೀಸ್ ಅನ್ನು ಕಳುಹಿಸಲಾಗುತ್ತುದೆ.

**12. ಗ್ರಾಹಕರ ಕೋರಿಕೆಯ ಆಧಾರದ ಮೇಲೆ ಆ್ಯನ್ಯೂಅಲ್ ಔಟ್‌ಸ್ಟ್ಯಾಂಡಿಂಗ್ ಬ್ಯಾಲೆನ್ಸ್ ಸ್ಟೇಟ್‌ಮೆಂಟ್ ಅನ್ನು ಕಳೆದ ಆರ್ಥಿಕ ವರ್ಷಕ್ಕಾಗಿ 30ನೇ ಏಪ್ರಿಲ್ ನಂತರ ನೀಡಲಾಗುತ್ತದೆ.**

**13. ಗ್ರಾಹಕರ ಸೇವೆಗಳು**

ವೆಬ್‌ಸೈಟ್‌ನಲ್ಲಿ ಅಪ್‌ಲೋಡ್‌ಮಾಡಲಾದ ಗ್ರಿವೆನ್ಸ್ ರೀಡ್ರೆಸೆಲ್ ಪಾಲಿಸಿಗೆ ( ಕುಂದು ಕೊರತೆ ಪರಿಹಾರ ನೀತಿಗೆ) ಅನುಗುಣವಾಗಿ, ನಮ್ಮ ಗ್ರಾಹಕರಿಗೆ ಮಾಹಿತಿ,ಪ್ರಾಡಕ್ಟ್‌ಗಳು ಹಾಗೂ ಸೇವೆಗಳಿಗೆ ಸುಲಭ ಪ್ರವೇಶಾವಕಾಶವನ್ನು ಒದಗಿಸುವಲ್ಲಿ ನಾವು ನಂಬಿಕೆಯನ್ನು ಇಡುತ್ತೇವೆ, ಹಾಗೆಯೇ ಅವರ ಕುಂದುಕೊರತೆಗಳನ್ನು ನಿವಾರಿಸುವ ವಿಧಾನವನ್ನು ಒದಗಿಸುತ್ತೇವೆ.

**ಗ್ರಾಹಕರು ಪತ್ರದ ಮೂಲಕ ಅಥವಾ ನಮ್ಮೊಂದಿಗೆ ನೋಂದಾಯಿಸಿದ ಕೊನೆಯದಾಗಿ ತಿಳಿದಿರುವ ಇಮೇಲ್ ಐಡಿಯ ಮೂಲಕ ಲಿಖಿತ ಸಂವಹನದ ಮೂಲಕ ಕೋರಿಕೆಯನ್ನು ಸಲ್ಲಿಸಬೇಕು.**

(i) ಕಚೇರಿಯಯಲ್ಲಿ ಭೇಟಿನೀಡುವ ಸಮಯ : ಸೋಮವಾರದಿಂದ ಶುಕ್ರವಾರ – ಬೆಳಿಗೆ 10:00 ರಿಂದ ಸಂಜೆ 4:00ವರೆಗೆ , ಶನಿವಾರ ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 1:00ವರೆಗೆ ( 2ನೇ ಶನಿವಾರ, ರವಿವಾರ ಹಾಗೂ ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ)

(ii) ಗ್ರಾಹಕರಿಗೆ ಸಂಬಂಧಿಸಿದ ಯಾವುದೇ ವಿಚಾರಣೆಗಳಿಗಾಗಿ ಶಾಖೆಯಲ್ಲಿನ ಕಾರ್ಯಾಚರಣೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದು.

**ಗ್ರಾಹಕರು ಸಮೀಪದ ಶಾಖೆಯ ಕಚೇರಿಯಲ್ಲಿ ಲಿಖಿತ ಕೋರಿಕೆಯನ್ನು ಸಲ್ಲಿಸಬಹುದು ಹಾಗೂ ಡಾಕ್ಯುಮೆಂಟ್‌ಗಳನ್ನು (ಕಾಗದಪತ್ರಗಳನ್ನು) ಕೆಳಗೆ ತಿಳಿಸಲಾದ ಸಮಯದ ಮಿತಿಗಳೊಳಗಡೆ ಪ್ರಕ್ರಿಯೆಗೊಳಿಸಲಾಗುವುದು :**

| | | |
|---|---|---|
| (i) | ಸಾಲದ ಖಾತೆಯ ಸ್ಟೇಟ್‌ಮೆಂಟ್ | 7 ಕೆಲಸದ ದಿನಗಳು |
| (ii) | ಟೈಟಲ್ ಡಾಕ್ಯುಮೆಂಟ್‌ಗಳ ಫೋಟೋಕಾಪಿ | 30 ದಿನಗಳು |
| (iii) | ಸಾಲ ಮುಕ್ತಾಯಗೊಳಿಸುವಿಕೆ/ವರ್ಗಾವಣೆಯ ಸಂದರ್ಭದಲ್ಲಿ ಮೂಲ ಡಾಕ್ಯುಮೆಂಟ್‌ಗಳನ್ನು ಹಿಂತಿರುಗಿಸುವಿಕೆ | ಅವಧಿಗೆ ಮೊದಲು ಮುಚ್ಚಿದ ಪಾವತಿಯನ್ನು ಪಡೆದ ಮತ್ತು ಅವಶ್ಯಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ತಾರೀಖಿನಿಂದ 30 ದಿನಗಳು |

**ಮೇಲಿನ ನಿಯಮಗಳು ಹಾಗೂ ನಿಬಂಧನೆಗಳನ್ನು ಸಾಲಗಾರ/ರು ಓದಿದ್ದಾರೆ/ ಮತ್ತೂಟ್ ಹೌಸಿಂಗ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಶೀಮತಿ/ಶ್ರೀ. ............................................................ ರವರು ಸಾಲಗಾರರಿಗೆ ಓದಿಹೇಳಿದ್ದಾರೆ ಹಾಗೂ ಸಾಲಗಾರ/ರು ಅರ್ಥಮಾಡಿಕೊಂಡಿದ್ದಾರೆ.**

**14. ಕುಂದುಕೊರತೆ ಪರಿಹಾರ (ಗ್ರಿವೆನ್ಸ್ ರೀಡ್ರೆಸಲ್)**

(a) ಗ್ರಾಹಕರು ತಮ್ಮ ದೂರುಗಳನ್ನು ಕೆಳಗಿನ ವಿಧಾನಗಳ ಮೂಲಕ ನೋಂದಾಯಿಸಿಕೊಳ್ಳಬಹುದು –

(i) ಮೌಖಿಕವಾಗಿ : ಶುಲ್ಕ ರಹಿತ ಸಂ. 18001021616ಕ್ಕೆ ಕರೆ ಮಾಡುವ ಮೂಲಕ ( ಸೊಮವಾರದಿಂದ ಶನಿವಾರ, ಬೆಳಿಗ್ಗೆ 9:30ರಿಂದ ಸಂಜೆ 6:00ರ ನಡುವೆ, ರವಿವಾರ ಹಾಗೂ ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ) .

(ii) ಲಿಖಿತರೂಪದಲ್ಲಿ: ಗ್ರಾಕರು ಸಾಲದ ಖಾತೆಯನ್ನು ಹೊಂದಿರುವ ಶಾಖೆಯ ಶಾಖಾ ಮ್ಯಾನೇಜರ್‌ರಿಗೆ ಪತ್ರ ಬರೆಯುವ ಮೂಲಕ ಅಥವಾ ಇಮೇಲ್ ಐಡಿ : mhflcustomercare@muthoot.comಗೆ ಇಮೇಲ್ ಕಳಯಹಿಸುವ ಮೂಲಕ ಲಿಖಿತರೂಪದಲ್ಲಿ ದೂರನ್ನು ನೀಡಬಹುದು.

(iii) ವೆಬ್‌ಸೈಟ್ : ಗ್ರಾಹಕರು ನಮ್ಮ ವೆಬ್‌ಸೈಟ್ www.muthoothousing.com ನಲ್ಲಿ ಲಭ್ಯವಿರುವ್ "Contact Us" ಲಿಂಕ್‌ನಲ್ಲಿ ತಮ್ಮ ಕುಂದುಕೊರತೆಗಳನ್ನು ನೋಂದಾಯಿಸಿಕೊಳ್ಳಬಹುದು.

(iv) ಸಹಾಯ ಮಾಡದಿದ್ದ ಸಂದರ್ಭದಲ್ಲಿ, ದೂರನ್ನು ಕೆಳಗಿನ ಎಸ್ಕಲೇಶನ್ ಮ್ಯಾಟ್ರಿಕ್ಸ್ ಪ್ರಕಾರ ದೂರನ್ನು ಎಸ್ಕಲೇಟ್ ಮಾಡಬಹುದು

ಬ್ರಾ ್ಯಂಚ್ ಆಪರೇಶನ್ಸ್ / ಬ್ರಾ ್ಯಂಚ್ ಮ್ಯಾನೇಜರ್ → ರೀಜನಲ್ ಮ್ಯಾನೇಜರ್ ಮ್ಯಾನೇಜರ್ / ರೀಜನಲ್ ಮ್ಯಾನೇಜರ್ → ಪ್ರಾದೇಶಿಕ ಕಾರ್ಯಾಚರಣೆಗಳು → ಸಿಇಒ → ಎಮ್‌ಡಿ

(v) ನಮ್ಮ ಗ್ರಿವೆನ್ಸ್ ರೀಡ್ರೆಸಲ್ ಆಫಿಸರ್ ಹೆಡ್ ಆಪರೇಶನ್ಸ್ ಆಗಿರುತ್ತಾರೆ

ವಿಳಾಸ : ಮತ್ತೂಟ್ ಹೌಸಿಂಗ್ ಫೈನಾನ್ಸ್ ಕಂಪನಿ ಲಿಮಿಟೆಡ್
01, 13ನೇ ಮಹಡಿ, ಪರಿಣೀ ಕ್ರೆಸೆಂಜೋ, ಪ್ಲಾಟ್ ನಂ. ಸಿ–38 ಹಾಗೂ ಸಿ–39,
ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ – 400 051

ಇಮೇಲ್ ಐಡಿ : Grievanceredressalofficer@muthoot.com

(vi) ಮಾಡಿದ ದೂರುಗಳನ್ನು ಎಮ್‌ಎಚ್‌ಎಫ್‌ಸಿಎಲ್ ಸ್ವೀಕರಿಸಿದ ದಿನಾಂಕದಿಂದ 7 ಕೆಲಸದದಿನಗಳೊಳಗೆ ಅಂಗೀಕರಿಸುತ್ತದೆ.

(vii) ಎಮ್‌ಎಚ್‌ಎಫ್‌ಸಿಎಲ್ ದೂರನ್ನು ಸ್ವೀಕರಿಸಿದ 15 ಕೆಲಸದ ದಿನಗಳೊಳಗೆ ಗ್ರಾಹಕರ ದೂರಿಗೆ ಪ್ರತಿಕ್ರಿಯೆಯನ್ನು ನೀಡುತ್ತದೆ. ಪ್ರತಿಕ್ರಿಯೆಗೆ ಹಳೆಯ ಡಾಕ್ಯುಮೆಂಟ್‌ಗಳು/ದಾಖಲೆಗಳು ಮುಂತಾದವುಗಳ ಮರುಪಡೆಯುವಿಕೆ ಅಗತ್ಯವಿರುವಾಗ ಎಮ್‌ಎಚ್‌ಎಫ್‌ಸಿಎಲ್ ದೂರನ್ನು ಸ್ವೀಕರಿಸಿದ 30 ದಿನಗಳೊಳಗೆ ಗ್ರಾಹಕರಿಗೆ ಹಿಂತಿರುಗಿಸುತ್ತದೆ.

(b) ರೆಗ್ಯೂಲೇಟರ್‌ಗೆ ಎಸ್ಕಲೇಶನ್ – ದೂರುದಾರರು ಒಂದು ತಿಂಗಳ ಅವಧಿಯೊಳಗೆ ಕಂಪೆನಿಯಿಂದ ಪ್ರತಿಕ್ರಿಯೆಯನ್ನು ಪಡೆಯದಿದ್ದರೆ ಅಥವಾ ಪಡೆದ ಪ್ರತಿಕ್ರಿಯೆಯಿಂದ ಸಂತುಷ್ಟರಾಗದ್ದಿದರೆ, ದೂರುದಾರರು ಎನ್‌ಎಚ್‌ಬಿಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್‌ನಲ್ಲಿ ಅಥವಾ ಅಂಚೆ ಮೂಲಕ ಎನ್‌ಎಚ್‌ಬಿ, ನವದೆಹಲಿ ಇಲ್ಲಿ ನ್ಯಾಶನಲ್ ಹೌಸಿಂಗ್ ಬ್ಯಾಂಕ್‌ನ ದೂರು ನಿವಾರಣಾ ಕಕ್ಷೆಯನ್ನು ಸಂಪರ್ಕಿಸಬಹುದು. ವಿವರಗಳು ಈ ಕೆಳಗಿನಂತಿವೆ:
ನ್ಯಾಷನಲ್ ಹೌಸಿಂಗ್ ಬ್ಯಾಂಕ್,
ಡಿಪಾರ್ಟ್‌ಮೆಂಟ್ ಆಫ್ ರೆಗ್ಯೂಲೇಶನ್ & ಸುಪ್ರಿವಿಷನ್ (ಕಂಪ್ಲೇಂಟ್ ರೀಡ್ರೆಸಲ್ ಸೆಲ್)
4ನೇ ಮಹಡಿ, ಕೋರ್ 5ಎ, ಇಂಡಿಯಾ ಹೆಬಿಟೇಟ್ ಸೆಂಟರ್,
ಲೋಧಿ ರೋಡ್, ನ್ಯೂ ದೆಲ್ಹಿ – 110 003
www.nhb.org.in

ಆಫ್‌ಲೈನ್ ವಿಧಾನ: https://nhb.org.in >>> https://nhb.org.in/wp-content/uploads/2021/08/complaint-form.pdf ಅಥವಾ https://nhb.org.in/citizencharter/Complaint_form.pdf ಇಲ್ಲಿ ಸಿಟಿಝುನ್ಸ್ ಚಾರ್ಟರ್‌ನಡಿಯ ಲಿಂಕ್‌ನಲ್ಲಿ ಉಪಲಬ್ಧವಿರುವ ನಿರ್ದಿಷ್ಟವಾದ ಫಾರ್ಮೆಟ್‌ನಲ್ಲಿ ಅಂಚೆ ಮೂಲಕ.

ಆಫ್‌ಲೈನ್ ವಿಧಾನ : www.grids.nhbonline.org.in

ನಾನು /ನಾವು ಒಪ್ಪಿಕೊಳ್ಳುವುದೇನೆಂದರೆ :

1. ನನ್ನ/ನಮ್ಮ ಅರ್ಜಿ ನಮೂನೆಯನ್ನು ಸಂಗ್ರಹಿಸುವ ಕಾರ್ಯನಿರ್ವಾಹಕರಿಗೆ ಈ ಅರ್ಜಿಯೊಂದಿಗೆ ನಗದು, ಬೇರರ್ ಚೆಕ್ ಅಥವಾ ಅದರ ಜೊತೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಪಾವತಿಗಳನ್ನು ಮಾಡಿಲ್ಲ.
2. ಕರಾರಿನ ಎಲ್ಲಾ ಇತರ ನಿಯಮಗಳು ಹಾಗೂ ನಿಬಂಧನೆಗಳು ನೀವು ಸಹಿ ಮಾಡಿದ ನಮ್ಮ ಸಾಲದ ಒಪ್ಪಂದದ ಪ್ರಕಾರ ಇರುತ್ತದೆ.
3. ಸಾಲದ ವಿವರವಾದ ನಿಯಮಗಳು ಹಾಗೂ ನಿಬಂಧನೆಗಳಿಗಾಗಿ, ಇಲ್ಲಿ ಪಾರ್ಟಿಗಳು ಸಾಲ ಹಾಗೂ ಸೆಕ್ಯೂರಿಟಿ ಡಾಕ್ಯುಮೆಂಟ್‌ಗಳನ್ನು ಕಾರ್ಯಗತಗೊಳಿಸಿದ/ಕಾರ್ಯಗತಗೊಳಿಸಲು ಉಲ್ಲೇಖಿಸುತ್ತಾರೆ ಹಾಗೂ ಅವಲಂಬಿಸಿರುತ್ತಾರೆ ಎಂದು ಈ ಮೂಲಕ ಒಪ್ಪಿಕೊಂಡಿರುತ್ತಾರೆ.
4. ನೀವು ಒದಗಿಸಿದ ಯಾವುದೇ ಮಾಹಿತಿ/ಡಾಕ್ಯುಮೆಂಟ್ ಸಂದೇಹಾಸ್ಪದವಾಗಿ ಕಂಡುಬಂದರೆ, ಕಂಪನಿಯು ಈ ಆಫರ್ ಆನ್ನು (ಕೊಡುಗೆಯನ್ನು) ಹಿಂಪಡೆಯಬಹುದು.
5. ಅದನ್ನು ಕಾರ್ಯಗತಗೊಳಿಸಲು ದಯವಿಟ್ಟು ಒಪ್ಪಂದವನ್ನು ಎಚ್ಚರಿಕೆಯಿಂದ ಓದಿರಿ, ನಿಮಗೆ ಅಗತ್ಯವಿದ್ದರೆ ಯಾವುದೇ ಷರತ್ತುಗಳನ್ನು ಅರ್ಥಮಾಡಿಕೊಳ್ಳಲು/ಸ್ಪಷ್ಟಪಡಿಸಲು ನಮ್ಮ ಕಾರ್ಯನಿರ್ವಾಹಕರು ನಿಮಗೆ ಸಹಾಯ ಮಾಡುತ್ತಾರೆ.

ದಿನಾಂಕ :

ಸ್ಥಳ :

ಸಾಲಗಾರ(ರ)/ಸಹಸಾಲಗಾರರ/ಜಾಮೀನುದಾರರ ಸಹಿ ಅಥವಾ ಹೆಬ್ಬೆರಳ ಗುರುತು

(ಸಾಲದಾತರ ಅಧಿಕೃತ ವ್ಯಕ್ತಿಯ ಸಹಿ )

ಸೂಚನೆ: ಎಮ್‌ಐಟಿಸಿಯ ಡುಪ್ಲಿಕೇಟ್ ಕಾಪಿಯನ್ನು ಸಾಲಗಾರರಿಗೆ ಹಸ್ತಾಂತರಿಸಬೇಕು